# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಶ್ರೀ ದೇವರಾಜ ಅರಸು ಬಡಾವಣೆ ಟಮಕ, ಕೋಲಾರ-563 103

ಸಂಖ್ಯೆ: ಬೆಂ.ಉ.ವಿ./ಕು.ಸ.ಕಾ/ಸಂ.ನವೀ/ [illegible] /2020-21 ದಿನಾಂಕ: 13.03.2021

**ಅಧಿಸೂಚನೆ**

ವಿಷಯ: **2020-21** ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ನವೀಕರಿಸುವ ಬಗ್ಗೆ.

ಉಲ್ಲೇಖ: 1.ಅಸಾಮಾನ್ಯ ವಿದ್ಯಾವಿಷಯಕ ಪರಿಷತ್ತು ಸಭೆಯ ನಡಾವಳಿ.ದಿನಾಂಕ:01.03.2021

2.ಅಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ ದಿನಾಂಕ: 03.03.2021

3.ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 09.03.2021

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ **2000** ದ **59**ನೇ ಪ್ರಕರಣದ **17**ನೇ ಉಪಬಂಧದಲ್ಲಿ ಪ್ರದತ್ತವಾದ ಅಧಿಕಾರದನ್ವಯ ಸಕ್ಷಮ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು, **2020-21** ನೇ ಸಾಲಿಗೆ **ನ್ಯೂ ಹಾರಿಜಾನ್ ಕಾಲೇಜು, 3ನೇ 'ಎ' ಕ್ರಾಸ್, 2ನೇ 'ಎ' ಮೇನ್,ಕಸ್ತೂರಿನಗರ, ಬೆಂಗಳೂರು-43.** ಇವರು ನಡೆಸುತ್ತಿರುವ ಕೆಳಕಂಡ ಕೋರ್ಸುಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಸಂಯೋಜನೆಯನ್ನು ನವೀಕರಿಸಿ ಮುಂದುವರಿಸಿದೆ

| ಕೋರ್ಸ್ | ವಿಷಯ | ವಿದ್ಯಾರ್ಥಿ ಪ್ರಮಾಣ |
|---|---|---|
| ಬಿ.ಕಾಂ | ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ | 200.(ಇನ್ನೂರು) |
| ಬಿ.ಬಿ.ಎ. | ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ | 90+30=120(ನೂರುಇಪ್ಪತ್ತು) |
| ಬಿ.ಸಿ.ಎ. | ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ | 120(ನೂರು ಇಪ್ಪತ್ತು) |

*ವಿ.ಸೂ: 1.) 2020-21ನೇ ಶೈಕ್ಷಣಿಕ ಸಾಲಿನ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಲಗತ್ತಿಸಿದೆ. ಕಾಲೇಜುಗಳಿಗೆ ಸಿಂಡಿಕೇಟ್ /ಸ್ಥಳೀಯ ವಿಚಾರಣಾ ಸಮಿತಿ ನಿಗಧಿಪಡಿಸಿದ ವಿದ್ಯಾರ್ಥಿ ಪ್ರಮಾಣದೊಂದಿಗೆ ಮಾತ್ರ ಸಂಯೋಜನೆಯನ್ನು ನವೀಕರಿಸಲಾಗಿದೆ. ಕಾಲೇಜು 15 ದಿನಗಳ ಒಳಗಾಗಿ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ನಮೂದಿಸಿರುವ ಕೊರತೆಗಳನ್ನು ಸರಿದೂಗಿಸಿಕೊಂಡು ಉತ್ತಮ ಪಡಿಸಿಕೊಂಡಿರುವ ಬಗ್ಗೆ ಹಾಗೂ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡಿರುವ ಕುರಿತು ಅನುಸರಣಾ ವರದಿಯನ್ನು ನೀಡತಕ್ಕದ್ದು. ಇಲ್ಲವಾದಲ್ಲಿ ಮುಂದಿನ ಶೈಕ್ಷಣಿಕ ವರ್ಷದ ಸಂಯೋಜನಾ ನವೀಕರಣದ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.*

---

ಷರತ್ತುಗಳು:

1. ಸ್ಥಳೀಯ ವಿಚಾರಣಾ ಸಮಿತಿಯು ನಮೂದಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.
2. ನಿಗಧಿತ ವಿದ್ಯಾರ್ಥಿ ಪ್ರವೇಶ ಪ್ರಮಾಣವನ್ನು ಮೀರಿದ್ದಲ್ಲಿ ಹೆಚ್ಚುವರಿ ಪ್ರವೇಶ ಪ್ರಮಾಣಕ್ಕೆ ವಿಶ್ವವಿದ್ಯಾಲಯ ಅಂಗೀಕಾರ ನೀಡುವುದಿಲ್ಲ.
3. ಯಾವುದೇ ಕೋರ್ಸಿಗೆ/ಕೋರ್ಸುಗಳಿಗೆ ವಿಶ್ವವಿದ್ಯಾಲಯದ ಪೂರ್ವಾನುಮತಿಯಿಲ್ಲದೆ ಶಾಖೆಗಳನ್ನು ಹೆಚ್ಚಿಸಬಾರದು.
4. ಸದರಿ ಪದವಿ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶ ಕಲ್ಪಿಸುವಾಗ ಸರ್ಕಾರದಿಂದ ಆಗಿಂದಾಗ್ಗೆ ಹೊರಡಿಸುವ ಮೀಸಲಾತಿ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
5. ವಿಶ್ವವಿದ್ಯಾಲಯವು, ಕಾಲೇಜಿನ ವಿದ್ಯಾರ್ಥಿಗಳು, ಭೋಧಕರು ಹಾಗೂ ಭೋಧಕೇತರ ನೌಕರರ ಬಗ್ಗೆ ಕಾಲಕಾಲಕ್ಕೆ ಹೊರಡಿಸುವ ನಿಯಮಾವಳಿ/ಪರಿನಿಯಮಾವಳಿ ಮತ್ತು ಆದೇಶಗಳನ್ನು ಕಾಲೇಜು ಪಾಲಿಸತಕ್ಕದ್ದು. ಕಾಲೇಜು, ವಿಶ್ವವಿದ್ಯಾಲಯದ ಸಂಯೋಜನಾ ಅಧಿಸೂಚನೆಗನುಗುಣವಾಗಿ ಕೋರ್ಸುಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಥಿ ಪ್ರಮಾಣವನ್ನು ಮೀರದಂತೆ ಹಾಗೂ ವಿಶ್ವವಿದ್ಯಾಲಯವು ಕೋರ್ಸುಗಳಿಗೆ ನಿಗಧಿಪಡಿಸಿರುವ ಅರ್ಹತಾ ನಿಯಮಾವಳಿಗಳನ್ನು ಉಲ್ಲಂಘಿಸದಂತೆ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ಮಾಡಿಸಿಕೊಳ್ಳತಕ್ಕದ್ದು.
6. ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ವಿಶ್ವವಿದ್ಯಾಲಯ ಕಾಲಕಾಲಕ್ಕೆ ನಿಗಧಿಪಡಿಸುವ ಪ್ರವೇಶ ಮತ್ತು ಇತರೆ ಶುಲ್ಕಗಳನ್ನು ಮೀರದಂತೆ, ನಿಗಧಿಪಡಿಸಿದ ವಿದ್ಯಾರ್ಥಿ ಪ್ರಮಾಣದ ಶೇಕಡಾ 50ರಂತೆ (ಸರ್ಕಾರಿ ಕಾಲೇಜುಗಳಿಗೆ ಶೇಕಡಾ 100ರಂತೆ) ವಿಶ್ವವಿದ್ಯಾಲಯವು ಪ್ರಾಯೋಜಿಸುವ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಮಾಡಿಸಿಕೊಳ್ಳತಕ್ಕದ್ದು.

7. ವೈಶಾಖ V/S ರಾಜಸ್ಥಾನದ ರಾಜ್ಯ ಸರ್ಕಾರದ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕ:13-8-1997ರ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಂತೆ, ಕಾಲೇಜು ಅಥವಾ ಕಛೇರಿ, ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ, ಯಾವುದೇ ವ್ಯಕ್ತಿಯಿಂದ (ಬೋಧಕ/ಬೋಧಕೇತರ/ಆಡಳಿತಮಂಡಳಿ) ಅಥವಾ ವಿದ್ಯಾರ್ಥಿಯಿಂದ ಮಹಿಳೆಯರಿಗೆ/ವಿದ್ಯಾರ್ಥಿನಿಯರಿಗೆ ಯಾವುದೇ ರೀತಿಯ ಕಿರುಕುಳ, ಲೈಂಗಿಕ ಕಿರುಕುಳ ನೀಡುವುದು ಶಿಕ್ಷಾರ್ಹ ಅಪರಾಧವಾಗಿದೆ. ಯಾವುದೇ ವ್ಯಕ್ತಿ/ವಿದ್ಯಾರ್ಥಿ ಈ ರೀತಿಯಾದ ಚುಟುವಟಿಕೆಗಳಲ್ಲಿ ಭಾಗಿಯಾಗಿದ್ದಲ್ಲಿ ಅಂತಹವರನ್ನು ಕೆಲಸದಿಂದ/ವಿದ್ಯಾರ್ಥಿದೆಸೆಯಿಂದ ವಿಮುಕ್ತಿಗೊಳಿಸಬಹುದಾಗಿದೆ. ಕಾಲೇಜು ಈ ರೀತಿಯ ಅಪರಾದಗಳನ್ನು/ಚಟುವಟಿಕೆಗಳನ್ನು ಮಟ್ಟಹಾಕಲು ಸರ್ವೋಚ್ಚ ನ್ಯಾಯಲಯದ ಆದೇಶದಂತೆ ದೂರು ಸಮಿತಿಯನ್ನು ಸ್ಥಾಪನೆ ಮಾಡತಕ್ಕದ್ದು.
8. ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿಗೊಳಿಸುವ ಮಟ್ಟಕ್ಕೆ ಕಾಲೇಜು ಕೋರ್ಸುಗಳ ಶಿಕ್ಷಣ ಕ್ರಮವನ್ನು ಉತ್ತಮಪಡಿಸತಕ್ಕದ್ದು. ವಿದ್ಯಾರ್ಥಿಗಳನ್ನು ಹಾಗೂ ಸೇವೆಯಲ್ಲಿರುವ ಭೋಧಕರುಗಳನ್ನು ಪ್ರಾಂಶುಪಾಲರು/ಆಡಳಿತಮಂಡಳಿಯವರು ಸಹಾನುಭೂತಿಯಿಂದ ನೋಡಿಕೊಳ್ಳತಕ್ಕದ್ದು.
9. ಕಾಲೇಜು ವಿನಾಕಾರಣ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ಇತರೇ ದಾಖಲೆಗಳನ್ನು ಆರು ತಿಂಗಳ ಅವಧಿ ಮೀರದಂತೆ ತಮ್ಮಲ್ಲಿಯೇ ಇಟ್ಟುಕೊಳ್ಳತಕ್ಕದ್ದಲ್ಲ, ಪ್ರವೇಶ ಅನುಮೋದನೆಗಾಗಿ ಸಲ್ಲಿಸಿರುವ ಅಂಕಪಟ್ಟಿ ಹಾಗೂ ಇತರೇ ದಾಖಲೆಗಳನ್ನು, ಪ್ರವೇಶ ಅನುಮೋದನೆಯಾದ ನಂತರ ವಿದ್ಯಾರ್ಥಿಗಳಿಗೆ ತ್ವರಿತವಾಗಿ ವಿತರಣೆಯನ್ನು ಮಾಡಿ ವಿಶ್ವವಿದ್ಯಾಲಯಕ್ಕೆ ತಿಳಿಸತಕ್ಕದ್ದು.
10. ವಿದ್ಯಾರ್ಥಿಗಳು, ವರ್ಗಾವಣೆ ಪತ್ರವನ್ನು ನೀಡುವ ಬಗ್ಗೆ ಮನವಿ ಸಲ್ಲಿಸಿದಲ್ಲಿ, ಕಾಲೇಜು ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ನೀಡದೆ, ವರ್ಗಾವಣೆ ಪತ್ರವನ್ನು ನೀಡತಕ್ಕದ್ದು. ಈ ಬಗ್ಗೆ ಆ ವರ್ಷದ/ಸೆಮಿಸ್ಟರ್‌ನ ಪೂರ್ಣವಾಗದ ಅವಧಿಯ ಭೋದನಾ ಶುಲ್ಕವನ್ನು ಹೊರತುಪಡಿಸಿ, ಯಾವುದೇ ಹೆಚ್ಚುವರಿ ಶುಲ್ಕವನ್ನು ವಸೂಲಿ ಮಾಡಲು ನಿಯಮಾವಳಿ ಪ್ರಕಾರ ಅನುಮತಿ ಇರುವುದಿಲ್ಲ.
11. ಯಾವುದೇ ರೀತಿಯಾದ ಕ್ಯಾಪಿಟೇಷನ್ ಶುಲ್ಕವನ್ನು ಕಾಲೇಜು ವಸೂಲಿ ಮಾಡತಕ್ಕದ್ದಲ್ಲ.
12. ಆಡಳಿತ ವ್ಯವಹಾರದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸತಕ್ಕದ್ದು.
13. **2021-22**ನೇ ಸಾಲಿಗೆ ಕೋರ್ಸುಗಳ ಸಂಯೋಜನಾ ನವೀಕರಣಕ್ಕೆ ಕಾಲೇಜು ತಪ್ಪದೆ ಅರ್ಜಿಯನ್ನು ಸಲ್ಲಿಸತಕ್ಕದ್ದು.
14. ***ಐದು ವರ್ಷಗಳನ್ನು ಪೂರೈಸಿರುವ ಕಾಲೇಜುಗಳು ನ್ಯಾಕ್ (NAAC) ಅನುಮೋದನೆಯನ್ನು ಕೂಡಲೇ ಪಡೆದುಕೊಳ್ಳತಕ್ಕದ್ದು.***
15. ಪ್ರಾಂಶುಪಾಲರು, ಮೌಲ್ಯಮಾಪನ ಕಾರ್ಯಕ್ಕಾಗಿ ಅರ್ಹ ಶಿಕ್ಷಕರ ಪಟ್ಟಿಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿಗಳ ಅಧ್ಯಕ್ಷರುಗಳಿಗೆ ತಪ್ಪದೇ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸಲಾಗುವುದು.
16. 2020.21ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಶುಲ್ಕ ಬಾಕಿ ಇರುವ ಮೊತ್ತವನ್ನು ವಿತ್ತಾಧಿಕಾರಿಗಳು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಇವರಿಗೆ ಪಾವತಿಸತಕ್ಕದ್ದು, ಇಲ್ಲವಾದಲ್ಲಿ ಅಂತಹ ಕಾಲೇಜುಗಳ ಮುಂದಿನ ಕಾರ್ಯಚಟುವಟಿಕೆಗಳನ್ನು ತಡೆಹಿಡಿಯಲಾಗುವುದು.
17. ಪ್ರತಿ ಕಾಲೇಜು ಆಯಾ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಎರಡು ಆಡಳಿತ ಮಂಡಳಿ (Governing Council) ಸಭೆಗಳನ್ನು ಕಡ್ಡಾಯವಾಗಿ ನಡೆಸಿ ವರದಿಯನ್ನು ವಿಶ್ವವಿದ್ಯಾಲಯಕ್ಕೆ ತಪ್ಪದೇ ಸಲ್ಲಿಸತಕ್ಕದ್ದು.

ಆದೇಶಾನುಸಾರ

15/3

ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕಾ, ಕೋಲಾರ-ಕರ್ನಾಟಕ-563 103.

ಗೆ,

ಪ್ರಾಂಶುಪಾಲರು,

ನ್ಯೂ ಹಾರಿಜಾನ್ ಪದವಿ ಕಾಲೇಜು, 3ನೇ 'ಎ' ಕ್ರಾಸ್, 2ನೇ 'ಎ' ಮೇನ್,ಕಸ್ತೂರಿನಗರ, ಬೆಂಗಳೂರು-43.

ಪ್ರತಿಗಳು:

1) ಸರ್ಕಾರದ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಬಹುಮಹಡಿಗಳ ಕಟ್ಟಡ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು-1.
2) ನಿರ್ದೇಶಕರು; ಕಾಲೇಜು ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು-1.
3) ಆಪ್ತಶಾಖೆ,ಕುಲಪತಿಗಳ ಕಛೇರಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ.
4) ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ.
5) ವಿತ್ತಾಧಿಕಾರಿಗಳು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ
6) ಕಛೇರಿ ಪ್ರತಿ.

PRINCIPAL
New Horizon College
College Code - 7604